MYSORE LEGISLATIVE ASSEMBLY.

TWENTY-SEVENTH DAY.

Friday, 10th April 1953.

The House met in the Assembly Hall, Old Public Offices, Bangalore, at Twelve of the Clock.

MR. SPEAKER (SRI H. SIDDAIYA, B.A., LL.B.), in the Chair.

QUESTIONS AND ANSWERS

Auction of fishing rights in tanks.

Sri N. HUTCHMASTHY GOWDA (Huliyurdurga).—

Will the Government be pleased to state :—

(*a*) the number of tanks the fishing rights in which were auctioned during the last three years, *viz.*, 1950-51, 1951-52 and 1952-53;

(*b*) the amount realised every year by the auction;

(a statement showing the names of tanks with the annual revenue derived in respect of each tank may kindly be furnished)

(*c*) the amount spent for conducting the auction ?

A.—Sri H. SIDDAVEERAPPA (Minister for Home and Industries).—

(*a*)	1950-51	..	230 tanks
	1951-52	..	258 tanks
	1952-53	..	178 tanks
			Rs. a. p.
(b)	1950-51	..	11,405 0 0
	1951-52	..	13,282 14 0
	1952-53	..	8,712 0 0

A statement showing the names of tanks with an annual revenue derived in respect of each tank is placed on the table of the House.

(*c*) Nil.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಹೀಗೆ 1950 ರಿಂದಲೂ ಪ್ರತಿ ವರ್ಷವೂ ಈ ಮಾನುಗಳನ್ನು ಹರಾಜು ಹಾಕುತ್ತಿರುವ ಕೆರೆಗಳ ಸಂಖ್ಯೆ ಕಮ್ಮಿಯಾಗಲು ಕಾರಣವೇನು ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗೆ ಪ್ರತಿವರ್ಷವೂ ಕಮ್ಮಿಯಾಗುತ್ತಿಲ್ಲ. 1951-52ರಲ್ಲಿ ಆ ಸಂಖ್ಯೆ ಜಾಸ್ತಿಯಾಗಿತ್ತು. ಆದರೆ 1952-53ರಲ್ಲಿ ನಮಗೆ ಬಂದಿರುವ ವರದಿಯ ಪ್ರಕಾರ ಮಳೆಯಿಲ್ಲದೆ ಕೆರೆಗಳೆಲ್ಲಾ ಬತ್ತಿ ಹೋದದ್ದರಿಂದ ಹರಾಜು ಹಾಕತಕ್ಕ ಕೆರೆಗಳ ಸಂಖ್ಯೆ ಕಮ್ಮಿಯಾಗಿರುತ್ತದೆಂದು ತಿಳಿದು ಬಂದಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಗ್ರಾಮಾಂತರ ಪ್ರದೇಶದಲ್ಲಿರುವ ಕೆರೆಗಳ ಮಾನುಗಳನ್ನು ಆಯಾ ಗ್ರಾಮದ ಜನರೇ ಹಿಡಿಯುತ್ತಿರುವುದರಿಂದ ಈ ಕೆರೆಗಳ ಹರಾಜು ಸಂಖ್ಯೆ ಕಮ್ಮಿಯಾಗಿರುತ್ತೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ತಾವು (ಸಿ) ಪ್ರಶ್ನೆಗೆ ಉತ್ತರವಾಗಿ "ಇಲ್ಲ" ಎಂದು ತಿಳಿಸಿದ್ದೀರಿ. ಹಾಗೆ ಈ ಕೆರೆಗಳನ್ನು ಹರಾಜು ಹಾಕಲು ಹೋದ ಆಫೀಸರುಗಳಿಗೆ ತಾವು ಟಿ. ಎ. ಮತ್ತು ಡಿ. ಎ. ಗಳನ್ನು ಕೊಡುವುದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಈ ಒಂದು ಕೆಲಸಕ್ಕೇ ಅವರೇನೂ ಪ್ರತ್ಯೇಕವಾಗಿ ಹೋಗುತ್ತಿಲ್ಲ. ಅವರು ಬೇರೆ ಯಾವುದಾದರೂ ಕೆಲಸಗಳ ಬಗ್ಗೆ ಹೋದಾಗ ಇದನ್ನು ಮಾಡಿಕೊಂಡು ಬರುತ್ತಾರೆ. ಆದ್ದರಿಂದ ಯಾವ ಖರ್ಚನ್ನೂ ತೋರಿಸಿಲ್ಲ. ಈ ಕೆಲಸವನ್ನು ವೆಟರಿನೆರಿ ಇಲಾಖೆಯವರೇ ವಹಿಸಿಕೊಂಡಿರುವುದರಿಂದ ಅವರು ಪ್ರತ್ಯೇಕ ಖರ್ಚನ್ನು ತೋರಿಸಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ತಾವು ಹೀಗೆ ಹರಾಜು ಹಾಕುವುದರಿಂದ ದೊಡ್ಡ ದೊಡ್ಡ ಕೆರೆಗಳಿಂದ ಹಣ ಜಾಸ್ತಿ ಬರುತ್ತಿದೆಯೋ ಅಥವಾ ಸಣ್ಣ ಸಣ್ಣ ಕೆರೆಗಳಿಂದ ಹಣ ಜಾಸ್ತಿ ಬರುತ್ತಿದೆಯೋ ?

ಶ್ರೀ ಎಚ್. ಸಿದ್ದವೀರಪ್ಪ.—ಆ ಬಗ್ಗೆ ಈಗ ಎಲ್ಲ ವನ್ನೂ ರೀ ಆರ್ಗನೈಜೇಷನ್ ಮಾಡಬೇಕೆಂದು ಉದ್ದೇಶಿಸಲಾಗಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಅದನ್ನು ಈ ವರ್ಷವೇ ಜಾರಿಗೆ ತರುವಂತೆ ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಪ್ರಯತ್ನ ಮಾಡಲಾಗುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ಬಾಬಿನಲ್ಲಿ ಹಣ ಹೆಚ್ಚಿಗೆ ಖರ್ಚಾಗುತ್ತಿರುವುದನ್ನು ಉಳಿಸತಕ್ಕ ಬಗ್ಗೆ ತಾವು ಏನೇನು ಕಾರ್ಯಕ್ರಮಗಳನ್ನು ಕೈಕೊಂಡಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ಈ ಮಾನುಗಳನ್ನು ಅಭಿವೃದ್ಧಿಮಾಡತಕ್ಕ ಬಗ್ಗೆ 40 ಸಾವಿರ ರೂಪಾಯಿಗಳನ್ನು ಖರ್ಚುಮಾಡಲಾಗುತ್ತಿದೆ. ಈ ಖರ್ಚನ್ನು ಇನ್ನೂ ಕಡಿಮೆಮಾಡದಂತೆ ನೋಡಿಕೊಂಡು, ಈಗ ಈ ಬಾಬಿನಿಂದ ಬರುತ್ತಿರುವ ಉತ್ಪತ್ತಿ ಖರ್ಚಿಗಿಂತಲೂ ಕಮ್ಮಿಯಾಗಿರುವುದರಿಂದ, ಇದರಿಂದ ಹೆಚ್ಚು ಲಾಭ ಬರುವಂತೆ ಮಾಡಲು ಯಾವರೀತಿ ಇದನ್ನು ನಡೆಸಬೇಕೆಂಬ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಕೆಲವು ವೇಳೆ ವೆಟರಿನೆರಿ ಇಲಾಖೆಯವರು 3-4 ಸಾರಿ ಹರಾಜು ಹಾಕಿದ್ದುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಆ ವಿವರಗಳು ನನಗೆ ಗೊತ್ತಿಲ್ಲ. ಅದೇನು ಕಾರಣಕ್ಕಾಗಿ ಹಾಗೆ ಮಾಡಲಾಯಿತೆಂಬುದನ್ನು ನಾನು ವಿಚಾರ ಮಾಡುತ್ತೇನೆ.

ಶ್ರೀ ಕೆ. ವಿ. ಬೈರೇಗೌಡ.—ಮಾನುಗಳನ್ನು ಯಾವ ನೀರಿನಲ್ಲಿ ಸಾಕುವುದು ಉತ್ತಮವೆಂದು ತಾವು ಭಾವಿಸಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—1941ರಲ್ಲಿ ಇದು ವ್ಯವಸ್ಥೆ ಆದದ್ದು. ಅಲ್ಲಿಂದೀಚೆಗೆ ಏನೂ ಬದಲಾವಣೆ ಯಾಗಿಲ್ಲ. ಆದ್ದರಿಂದ ಈಗ ಒಂದು ರೀ ಆರ್ಗನೈಜೇಷನ್ ಮಾಡಿ, ಯಾವ ಯಾವ ಜಾತಿಯ ಮಾನುಗಳನ್ನು ಸಾಕಬೇಕು, ಎಲ್ಲ ಅಂಥ ಮಾನುಗಳನ್ನು ಸಾಕಲು ಅನುಕೂಲವಿದೆ ಎಂಬುದನ್ನೂ ಪರಿಶೀಲನೆ ಮಾಡಬೇಕೆಂದು ಸರ್ಕಾರ ಆಲೋಚಿಸುತ್ತಿದೆ. ಆದರೆ ಈಗ ಕೇವಲ ಒಂದು ಜಾತಿಯ ಸಣ್ಣ ಸಣ್ಣ ಮಾನುಗಳನ್ನು ಮಾತ್ರ ಇಲ್ಲಿ ಸಾಕಲಾಗುತ್ತಿದೆ. ಈ ಮಾನಿನ ವ್ಯವಸಾಯ ಉತ್ತಮಪಡಿಸಲು ಪರಿಶೀಲನೆ ನಡೆಸಲಾಗುತ್ತದೆ.

ಶ್ರೀ ಕೆ. ವಿ. ಬೈರೇಗೌಡ —ಇವುಗಳನ್ನು ಆಹಾರ ಕ್ಕಾಗಿ ಉತ್ಪತ್ತಿಮಾಡುತ್ತೀರೋ ಅಥವಾ ಸರ್ಕಾರದವರು ನಮ್ಮನೆ ಸಾಕಬೇಕೆಂದು ಉತ್ಪತ್ತಿಮಾಡುತ್ತಿದ್ದೀರೋ ?

ಶ್ರೀ ಎಚ್. ಸಿದ್ದವೀರಪ್ಪ.—ಆಹಾರದ ಜೊತೆಗೆ ಇದನ್ನೂ ಸಪ್ಲಿಮೆಂಟ್ ಫುಡ್ ಮಾಡಬೇಕೆಂದಿದೆ.

ಶ್ರೀ ಕೆ. ವಿ. ಬೈರೇಗೌಡ.—ಈಗ ತಾವು ಖರ್ಚು ಮಾಡುತ್ತಿರುವ 40 ಸಾವಿರ ರೂಪಾಯಿಗಳ ಪೈಕಿ ಸಿಬ್ಬಂದಿಗಾಗಿ ಎಷ್ಟು ಖರ್ಚಾಗುತ್ತಿದೆ ಮತ್ತು ಈ ಮಾನುಗಳ ಅಭಿವೃದ್ಧಿಗಾಗಿ ಎಷ್ಟು ಖರ್ಚಾಗುತ್ತಿದೆ ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಕೆ. ವಿ. ಬೈರೇಗೌಡ.—ಕೇವಲ ಇದರ ಡೆವಲಪ್‌ಮೆಂಟಿಗಾಗಿ 4½ ಸಾವಿರ ರೂಪಾಯಿಗಳನ್ನು ಮಾತ್ರ ತಾವು ಖರ್ಚುಮಾಡುತ್ತಿರುವುದರಿಂದ, ಅಷ್ಟು ಮೊಬಲಗೇ ಸಾಕೆಂಬುದಾಗಿ ತಮಗೆ ಗೊತ್ತಾಗಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಈ ಬಾಬು ಎಷ್ಟರ ಮಟ್ಟಿಗೆ ಅಭಿವೃದ್ಧಿಯಾಗಬೇಕೋ ಅಷ್ಟರ ಮಟ್ಟಿಗೆ ಆಗಿಲ್ಲ. ಈಗ ತಾನೆ ಇನ್ನೂ ಅನೇಕ ಜಾತಿಯ ಮಾನುಗಳನ್ನು ಡೆವಲಪ್ ಮಾಡಲಾಗುತ್ತಿದೆ. ನಾವಿನ್ನೂ ಈಗ ರಿಸರ್ಚ್ ಮಟ್ಟದಲ್ಲಿದ್ದೇವೆ. ಎಗ್ಸಾಮಿನೇಷನ್ ಆಕ್ಟಿವೀಟೀಸ್‌ಗಳನ್ನು ನಾವಿನ್ನೂ ಕೈಕೊಂಡಿಲ್ಲ. ಈ ಬಾಬಿಗಾಗಿ ನಾವು ಸ್ವಲ್ಪ ಹಣವನ್ನು ವೆಚ್ಚಮಾಡಿದಾಗ್ಗೂ ಇದರಿಂದ ಹೆಚ್ಚಿನ ಲಾಭ ಪಡೆಯಬಹುದೆಂದು ತಿಳಿದು ಬಂದಿದೆ.

ಶ್ರೀ ಎಸ್. ಸಿದ್ದಪ್ಪ.—ಸಂಸ್ಥಾನದ್ಯಂತವೂ ಮಾನುಗಳನ್ನು ಹರಾಜು ಹಾಕುವ ಕೆರೆಗಳು ಯಾವುವು ಮತ್ತು ಅವುಗಳ ಸಂಖ್ಯೆ ಎಷ್ಟೆಂಬುದನ್ನು ತಿಳಿಸುವುದ ಕ್ಕಾಗುತ್ತದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ಆ ರೀತಿ ಹರಾಜು ಮಾಡಲಾಗುತ್ತಿರುವ ಕೆರೆಗಳ ಸಂಖ್ಯೆ 178. ಆ ಒಂದು ಪಟ್ಟಿಯನ್ನು ಈ ಸಭೆಯ ಟೇಬಲ್ ಮೇಲಿಡಲಾಗಿದೆ.

ಶ್ರೀ ಎಸ್. ಸಿದ್ದಪ್ಪ.—ಈ 178 ಕೆರೆಗಳಲ್ಲಿ ಮಾನುಗಳನ್ನು ಸಾಕುವ ಪದ್ಧತಿಯಿಂದ ಸರ್ಕಾರಕ್ಕೇನಾದರೂ ಲಾಭ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಸಧ್ಯಕ್ಕೆ ಅಂಥ ಲಾಭ ವೇನೂ ಬಂದಿಲ್ಲ. ಇದನ್ನು ಸರಿಯಾಗಿ ಅಭಿವೃದ್ಧಿ ಮಾಡಿದರೆ ಇದರಿಂದ ಹೆಚ್ಚಿನ ಫಾಯಿದೆ ಸರ್ಕಾರಕ್ಕೆ ಬರುತ್ತದೆ ಎಂಬ ಅಂಶ ಸರ್ಕಾರದವರಿಗೆ ಚೆನ್ನಾಗಿ ಗೊತ್ತಿದೆ.

ಆದರೆ ಈ ಇಲಾಖೆಯನ್ನೇ ಸಂಪೂರ್ಣವಾಗಿ ತೆಗೆದು ಹಾಕಬೇಕೆಂಬುದಾಗಿಯೂ ಒಂದು ಅಭಿಪ್ರಾಯ ಬಂದಿದೆ. ಇನ್ನೊಂದು ಅಭಿಪ್ರಾಯ, ಇದನ್ನು ಚೆನ್ನಾಗಿ ಅಭಿವೃದ್ಧಿಮಾಡಬೇಕು ಎಂಬುದಾಗಿ ಬಂದಿದೆ. ಹೀಗೆ ಈ ಎರಡು ಅಭಿಪ್ರಾಯಗಳು ಈಗ ಸರ್ಕಾರದ ಮುಂದಿವೆ. ಹೀಗೆ ಈ ಎರಡು ಅಭಿಪ್ರಾಯಗಳೂ ಈಗ ಸರ್ಕಾರದವರ ಪರ್ಯಾಲೋಚನೆಯಲ್ಲಿರುವುದರಿಂದ, ನಾವೀಗ ಇದರ ಬಗ್ಗೆ ಏನು ಮಾಡಬೇಕೆಂಬುದನ್ನು ತೀವ್ರವಾಗಿ ಪರ್ಯಾಲೋಚನೆ ಮಾಡುತ್ತಿದ್ದೇವೆ. ನಮಗೆ ಈ ವರ್ಷ ಸುಮಾರು 2 ಲಕ್ಷ 75 ಸಾವಿರ ರೂಪಾಯಿ ಮಾನು ಉತ್ಪತ್ತಿಯಾಗಿದೆಯೆಂದು ವರದಿ ಬಂದಿದೆ.

Income derived from the Road Transport Department after the present General Manager assumed Office.

Q.—531. Sri B. N. BORANNA GOWDA (Belur).—

Will the Government be pleased to state :—

(*a*) how long it is since the present General Manager, Government Road Transport, assumed charge of that office;

(*b*) the income derived from the Road Transport Department since he assumed charge of that office;

(*c*) whether it is a fact that a loss about Rs. 90,000 has been incurred from June 1952 to September 1952;

(*d*) the reasons for the fall in income to Government ?